ಅ) ಇತ್ತೀಚಿನ ವರ್ಷಗಳಲ್ಲಿ ಕಂದಾಯ ಇಲಾಖೆಯ ತಾಲ್ಲೂಕು ಕಛೇರಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ರಾಜಸ್ವ ನಿರೀಕ್ಷಕರ ಕೆಲಸ ಕಾರ್ಯಗಳು ಹೆಚ್ಚಾಗಿ ಕ್ಲುಪ್ತ ಸಮಯದಲ್ಲಿ ಕೆಲಸ ಕಾರ್ಯಗಳು ನಿರ್ವಹಿಸಲು ಕಷ್ಟ ಸಾಧ್ಯವಾಗುತ್ತಿರುವುದು ನಿಜವೇ ;

ಆ) ಈ ನಿಟ್ಟಿನಲ್ಲಿ ರಾಜಸ್ವ ನಿರೀಕ್ಷಕರ ಹೆಚ್ಚಿನ ಹುದ್ದೆಗಳನ್ನು ಸೃಷ್ಟಿಸಿರುವ ವಿಷಯ ಸರ್ಕಾರದ ಮುಂದಿದೆಯೇ ;

ಇ) ಹಾಗಿದ್ದಲ್ಲಿ, ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗುವುದೇ (ಮಾಹಿತಿ ನೀಡುವುದು) ?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಸಚಿವರು) –

ಅ) ಇಲ್ಲ

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

194 (599) : ಶ್ರೀ ಗೋಪಾಲಕೃಷ್ಣ ಬೇಳೂರು ಬಿ.ಕೆ. (ಸಾಗರ)– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಾವಿರಾರು ಎಕರೆ ಗೋಮಾಳ ಜಮೀನಿನ ಬಳಕೆಯ ಮೇಲಿರುವ ನಿಷೇಧದಿಂದ ಸ್ಮಶಾನ, ಶಾಲೆ ಮತ್ತು ಬಗರ್‌ಹುಕುಂ ಜಮೀನಿನ ಮಂಜೂರಾತಿಯ ಪ್ರಕರಣಗಳು ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಬಂದಿದ್ದಲ್ಲಿ, ಬಾಕಿ ಪ್ರಕರಣಗಳನ್ನು ಇತ್ಯರ್ಥಗೊಳಿಸಿ ಮಂಜೂರು ಮಾಡಲು ಸರ್ಕಾರ ಕೈಗೊಂಡ ಕ್ರಮವೇನು ?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಸಚಿವರು)–

ಅ) ಹೌದು

ಆ) ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂ: 14048/2005ರಲ್ಲಿ ರಾಜ್ಯದಲ್ಲಿನ ಗೋಮಾಳ ಜಮೀನುಗಳನ್ನು ಗೋಮಾಳವನ್ನಾಗಿಯೇ ಮುಂದುವರೆಸಿಕೊಂಡು ಹೋಗತಕ್ಕದ್ದೆಂದು ಮತ್ತು ಸದರಿ ಜಮೀನನ್ನು ಬೇರೆ ಯಾವ ಉದ್ದೇಶಕ್ಕೂ ಮಂಜೂರು

ಮಾಡಬಾರದೆಂದು ಆದೇಶ ನೀಡಿದ್ದರ ಹಿನ್ನೆಲೆಯಲ್ಲಿ ಗೋಮಾಳ ಜಮೀನನ್ನು ಯಾವುದೇ ಉದ್ದೇಶಕ್ಕೆ ಮಂಜೂರಾತಿ ಮಾಡುವ ಕ್ರಮವನ್ನು ಸ್ಥಗಿತಗೊಳಿಸಲಾಗಿತ್ತು. ಆದರೆ ರಿಟ್ ಅಪೀಲ್ ಸಂ:1353/2006ರಲ್ಲಿ ವಿಭಾಗೀಯ ಪೀಠವು ಮೇಲ್ಕಂಡ ಆದೇಶವನ್ನು ಪುನರ್ ಪರಿಶೀಲಿಸಿ ಜಿಲ್ಲಾಧಿಕಾರಿಗಳು ಗೋಮಾಳ ಜಮೀನುಗಳನ್ನು ಅಲ್ಲಿಯ ದನಕರುಗಳಿಗನುಗುಣವಾಗಿ ಅವಶ್ಯಕತೆಗಿಂತ ಹೆಚ್ಚಿಗೆ ಇದ್ದಲ್ಲಿ ಅಕ್ರಮ ಸಕ್ರಮ ಸಮಿತಿಗಳ ಮುಂದೆ ಬಾಕಿ ಇರುವ ಅರ್ಜಿದಾರರುಗಳಿಗೆ ಮಂಜೂರಾತಿ ಮಾಡಲು ಆದೇಶ ನೀಡಿರುತ್ತದೆ. ಅದರಂತೆ ರಾಜ್ಯದಾದ್ಯಂತ ಗೋಮಾಳ ಜಮೀನುಗಳನ್ನು ಅಗತ್ಯಕ್ಕಿಂತ ಹೆಚ್ಚಿಗೆ ಇದ್ದಲ್ಲಿ ಬಗರ್ ಹುಕುಂ ಸಾಗುವಳಿದಾರರಿಗೆ ಮಂಜೂರು ಮಾಡುವಂತೆ ದಿನಾಂಕ: 05.01.2007ರಂದು ಸುತ್ತೋಲೆ ಹೊರಡಿಸಲಾಗಿದೆ.

ಸ್ಮಶಾನಕ್ಕಾಗಿ ಹಾಗೂ ಸರ್ಕಾರಿ ಶಾಲೆಗಳಿಗಾಗಿ ಗೋಮಾಳ ಜಮೀನು ಮಂಜೂರು ಮಾಡುವುದು ಗ್ರಾಮೀಣ ಸಮುದಾಯದ ಸಾರ್ವಜನಿಕ ಉದ್ದೇಶವಾಗಿದ್ದು ಸದರಿ ಉದ್ದೇಶಕ್ಕೆ ಸರ್ಕಾರವು ಯಾವುದೇ ನಿರ್ಬಂಧವಿಲ್ಲದೇ ಜಮೀನನ್ನು ಮಂಜೂರು ಮಾಡುತ್ತಿದೆ.

195 (600) : ಶ್ರೀ ಗೋಪಾಲಕೃಷ್ಣ ಬೇಳೂರು ಬಿ.ಕೆ. (ಸಾಗರ)– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1961ನೇ ಇಸವಿಯ ಭೂಸುಧಾರಣೆ ಕಾಯ್ದೆಯಡಿಯಲ್ಲಿ ನಮೂನೆ '7ಎ' ಮೂಲಕ ಸ್ವೀಕರಿಸಲಾಗಿರುವ ಅರ್ಜಿಗಳ ಸಂಖ್ಯೆ ಎಷ್ಟು ;

ಆ) ಶಿವಮೊಗ್ಗ ಜಿಲ್ಲೆಯಲ್ಲಿ ಸ್ವೀಕರಿಸಿರುವ ಅರ್ಜಿಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು, ಗ್ರಾಮಗಳವಾರು ವಿವರ ನೀಡುವುದು) ;

ಇ) ಸದರಿ ಅರ್ಜಿಗಳ ವಿಲೇವಾರಿಯನ್ನು ಭೂ ನ್ಯಾಯ ಮಂಡಳಿಗೆ ವಹಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ ;

ಈ) ಇಲ್ಲದಿದ್ದಲ್ಲಿ, ಸದರಿ ಅರ್ಜಿಗಳನ್ನು ನಿರ್ದಿಷ್ಟ ಕಾಲಮಿತಿಯೊಳಗೆ ವಿಲೇವಾರಿ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು ?